■ ಹನಿ



## ಪ್ರಭಾವಶಾಲಿ ಮಹಿಳೆ

'ಬ್ಯಾಂಕಿನ ಪಾಸ್‌ಬುಕ್ ಇಲ್ಲದಿದ್ದರೂ ಪರವಾಗಿಲ್ಲ, ಫೇಸ್‌ಬುಕ್‌ನಲ್ಲಿ ಅಕೌಂಟ್ ಇರಬೇಕು' ಎನ್ನುವ ಕಾಲವಿದು. ಸಾಮಾಜಿಕ ಜಾಲತಾಣಗಳಲ್ಲಿ ಉಳಿದೆಲ್ಲವನ್ನೂ ಬದಿಗೊತ್ತಿ ಮುಂಚೂಣಿಯಲ್ಲಿರುವ ಫೇಸ್‌ಬುಕ್‌ನ 'ಅತ್ಯಂತ ಜನಪ್ರಿಯ ಫೇಸ್' ಈ ಶೆರಿಲ್ ಕಾರಾ ಸ್ಯಾಂಡ್‌ಬರ್ಗ್. 44ರ ಹರೆಯದ ಶೆರಿಲ್ ಸ್ಯಾಂಡ್‌ಬರ್ಗ್ (ಬರ್ತ್‌ಡೇ 28/8/1969) ಫೇಸ್‌ಬುಕ್ ಕಂಪೆನಿಯ ಮುಖ್ಯ ನಿರ್ವಹಣಾ ಅಧಿಕಾರಿ (ಸಿಒಓ). ಫೇಸ್‌ಬುಕ್‌ನ ಎಂಟು ಮಂದಿ ನಿರ್ದೇಶಕರಲ್ಲಿ ಒಬ್ಬಳಾಗಿರುವ ಈಕೆ, ಕಂಪೆನಿಯ ಮೊದಲ ಮಹಿಳಾ ನಿರ್ದೇಶಕಿಯೂ ಹೌದು. 2012ರಲ್ಲೇ ಟೈಮ್ ಮ್ಯಾಗಸಿನ್‌ನ 'ಜಾಗತಿಕ ಪ್ರಭಾವಶಾಲಿ 100 ವ್ಯಕ್ತಿ'ಗಳ ಪಟ್ಟಿಯಲ್ಲಿ ಸ್ಥಾನ ಗಳಿಸಿದಾಕೆ. ಸುಶಿಕ್ಷಿತ ಯೆಹೂದಿ ಕುಟುಂಬದಿಂದ ಬಂದಿರುವ ಈ ಅಮೆರಿಕನ್ ಪ್ರಜೆ, ಹಾರ್ವರ್ಡ್ ಬಿಸಿನೆಸ್ ಸ್ಕೂಲಿನ ಎಂಬಿಎ ಪದವೀಧರೆ.

2012ರ ಆರಂಭದಲ್ಲಿ ಈಕೆ 'ದಿ ವಾಷಿಂಗ್ಟನ್ ಪೋಸ್ಟ್' ಕಂಪೆನಿಯಲ್ಲಿ ಉನ್ನತ ಹುದ್ದೆಗೆ ಯತ್ನಿಸುತ್ತಿದ್ದಾಗ, ಕ್ರಿಸ್ಮಸ್ ಪಾರ್ಟಿಯೊಂದರಲ್ಲಿ ಫೇಸ್‌ಬುಕ್ ಒಡೆಯ ಜೂಕರ್‌ಬರ್ಗ್‌ನ ಪರಿಚಯವಾಯಿತು. ಈಕೆಯ ಜಾಣ್ಮೆ ಮತ್ತು ವ್ಯಕ್ತಿತ್ವದಿಂದ ಪ್ರಭಾವಿತನಾದ ಜೂಕರ್‌ಬರ್ಗ್, ತನ್ನ ಕಂಪೆನಿಯಲ್ಲಿ ಅದುವರೆಗೆ ಇಲ್ಲದ ಸಿಒಓ ಹುದ್ದೆ-ಯನ್ನು ಈಕೆಗಾಗಿಯೇ ಸೃಷ್ಟಿಸಿದ. ಅದುವರೆಗೆ ಗೂಗಲ್‌ನಲ್ಲಿ ಉಪಾಧ್ಯಕ್ಷೆ ಆಗಿದ್ದ ಶೆರಿಲ್, ಹಾಗೆ ಫೇಸ್‌ಬುಕ್ ಸೇರಿದ್ದು ಸಿನಿಮಾ ಕಥೆಯಂತಿದೆ. ಕೆಲಸಕ್ಕೆ ಸೇರಿದ ದಿನವೇ ಈಕೆಯ ತಿಂಗಳ ಸಂಬಳ 3 ಲಕ್ಷ ಡಾಲರ್; ಜತೆಗೆ 30 ಕೋಟಿ ಡಾಲರ್ ಮೌಲ್ಯದ ಫೇಸ್‌ಬುಕ್ ಷೇರುಗಳನ್ನೂ ನೀಡಲಾಯಿತು. ಈ ವರ್ಷದ ಆರಂಭದಲ್ಲಿ ಈಕೆಯ ಒಟ್ಟು ಆಸ್ತಿಯ ಮೊತ್ತ ನೂರು ಕೋಟಿ ಅಮೆರಿಕನ್ ಡಾಲರ್! ಇದರಲ್ಲಿ ಫೇಸ್‌ಬುಕ್ ಷೇರುಗಳಲ್ಲದೆ ವಾಲ್ಟ್‌ಡಿಸ್ನಿ, ವಿಡೇ, ಐಸಿಜಿಡಿ ಮುಂತಾದ ದೈತ್ಯ ಕಂಪೆನಿಗಳ ಷೇರುಗಳೂ ಇವೆ. ಈಕೆ ಅಲ್ಲೂ ನಿರ್ದೇಶಕಿ.

ಗೂಗಲ್‌ನಲ್ಲಿದ್ದಾಗ ಗೂಗಲ್.ಆರ್ಗ್ ಎಂಬ ದತ್ತಿ ಸಂಸ್ಥೆ ಆರಂಭಿಸಿದ ಕೀರ್ತಿ ಈಕೆಯದು. ಅಮೆರಿಕದ ಖಜಾನೆಯಲ್ಲಿ ಸಿಬ್ಬಂದಿ ಮುಖ್ಯಸ್ಥೆ ಆಗಿದ್ದಾಗಲೂ ಹೆಸರು ಮಾಡಿದ್ದ ಈಕೆ, ಫೇಸ್‌ಬುಕ್ ಸೇರಿದ ಬಳಿಕ ಅಲ್ಲಿ ಜಾಹೀರಾತು ಆರಂಭಿಸಿ ಆದಾಯ ಹೆಚ್ಚಿಸಿದಾಕೆ. 24ರ ಹರೆಯದಲ್ಲಿ ಬ್ರಿಯಾನ್ ಕ್ರಾಫ್‌ನನ್ನು ಮದುವೆಯಾಗಿ ಮರುವರ್ಷವೇ ಡೈವೋರ್ಸ್ ಕೊಟ್ಟ ಶೆರಿಲ್, ಈಗ ಡೇವಿಡ್ ಗೋಲ್ಡ್‌ಬರ್ಗ್ ಜತೆ ಮದುವೆಯಾಗಿ ಎರಡು ಮಕ್ಕಳ ತಾಯಿ. ಗಂಡ 'ಸರ್ವೇಮಂಕಿ' ಸಂಸ್ಥೆಯ ಸಿಇಓ. ಲೇಖಕಿ ಮತ್ತು ಹೋರಾಟಗಾರ್ತಿಯೂ ಆಗಿರುವ ಶೆರಿಲ್ ಇತ್ತೀಚೆಗೆ ದೆಹಲಿಗೆ ಬಂದು ಹೋದದ್ದು ದೊಡ್ಡ ಸುದ್ದಿಯಾಯಿತು. ಹೋದಲ್ಲೆಲ್ಲಾ ಮಹಿಳೆಯರ ಹಕ್ಕುಗಳ ಬಗ್ಗೆ ಮಾತನಾಡುವ ಶೆರಿಲ್ ಹೊಸಕಾಲದ ಮಹಿಳೆಯರ ಫೇವರೆಟ್ ಮುಖ.



## ತಾರುಣ್ಯದ ಹೊಡೆತ

ನಿಕ್ ಕರ್ಗಿಯೋಸ್! ವಿಶ್ವ ಟೆನಿಸ್ ಶ್ರೇಯಾಂಕದಲ್ಲಿ ಈತನ ಸ್ಥಾನ 144ನೆಯದ್ದು. ಕಳೆದ ವಾರ ವಿಂಬಲ್ಡನ್ ಕೋರ್ಟ್‌ನಲ್ಲಿ ಈತ ಎದುರಿಸಿದ್ದು ವಿಶ್ವದ 'ನಂಬರ್ ಒನ್' ಆಟಗಾರ ರಫಾಲ್ ನಡಾಲ್‌ನನ್ನು. 14 ಸಲ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆದ್ದಿರುವ ಎಲ್ಲರ ಅಚ್ಚುಮೆಚ್ಚಿನ ಆಟಗಾರ ರಫಾನನ್ನು ಎದುರಿಸುವುದೇ ಒಂದು ಸಾಹಸ. ಅಂಥದ್ದರಲ್ಲಿ ನಿಕ್, ರಫಾನನ್ನು ಎದುರಿಸಿದ್ದು ಮಾತ್ರವಲ್ಲ, ನಾಲ್ಕು ಸೆಟ್‌ಗಳ ಭರ್ಜರಿ ಹೋರಾಟದಲ್ಲಿ ಕಟ್ಟಿ ಕೆಡವಿ ಹಾಕಿದ. 7-6 (7/5), 5-7, 7-6 (7/5), 6-3 ಸ್ಕೋರ್‌ಗಳಲ್ಲಿ ನಿಕ್ ಗೆದ್ದ ಈ ಪಂದ್ಯ ಇತ್ತೀಚಿನ ವಿಂಬಲ್ಡನ್ ಇತಿಹಾಸದಲ್ಲೇ ಅತ್ಯಂತ ರೋಚಕ ಪಂದ್ಯ.

'ಟಾಪ್ 100'ನಿಂದ ಹೊರಗಿರುವ ಆಟಗಾರನೊಬ್ಬ ವಿಶ್ವದ ನಂಬರ್ ಒನ್ ಆಟಗಾರನನ್ನು ಕೆಡವಿದ್ದು ವಿಂಬಲ್ಡನ್‌ನ ಇತ್ತೀಚಿನ ಇತಿಹಾಸದಲ್ಲಿ ಇದೇ ಮೊದಲು! (ಈ ಹಿಂದೆ 1992ರಲ್ಲಿ ಜಿಮ್ ಕೊರಿಯರ್‌ನನ್ನು ಆ್ಯಂಡ್ರೀ ಒಲೋಸ್ಕಿ ಕೆಡವಿದ್ದ.) ಇನ್ನೂ 19ರ ಹರೆಯದ (ಬರ್ತ್‌ಡೇ 27/4/1995) 2012ರಲ್ಲಿ 12ನೇ ತರಗತಿ ಮುಗಿಸಿದ ನಿಕ್, ವೃತ್ತಿಪರ ಆಟಗಾರನಾಗಿದ್ದೇ ಕಳೆದ ವರ್ಷ. ಅಷ್ಟರಲ್ಲೇ ಈತನ ತಾರುಣ್ಯದ ಹೊಡೆತ ದೊಡ್ಡ ಸುದ್ದಿ ಮಾಡಿದೆ. ಕಳೆದ ವರ್ಷ ಆಸ್ಟ್ರೇಲಿಯನ್ ಓಪನ್‌ನಲ್ಲಿ ಬಾಲಕರ ವಿಭಾಗದ ಚಾಂಪಿಯನ್ ಆಗಿರುವ ಹಾಗೂ ಬಾಲಕರ ಡಬಲ್ಸ್ ಪ್ರಶಸ್ತಿ ಗೆದ್ದಿರುವ ನಿಕ್, ಮುಂದಿನ ವರ್ಷಗಳಲ್ಲಿ ಕಣ್ಣಿಟ್ಟು ನೋಡಬೇಕಾದ ಆಟಗಾರ! ಗ್ರೀಕ್ ತಂದೆ, ಮಲೇಷ್ಯನ್ ತಾಯಿಯ ಮಗ ಈಗ ಆಸ್ಟ್ರೇಲಿಯನ್ ಪ್ರಜೆ, ಮಾತ್ರವಲ್ಲ ದೇಶದ ಡೇವಿಸ್‌ಕಪ್ ಆಟಗಾರನೂ ಹೌದು.

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65